

ಅವಲತ್ತುಕೊಳ್ಳುತ್ತಾ ಪರೋಕ್ಷವಾಗಿ ನಮಗೂ ಶತ್ರುಗಳಿದ್ದಾರೆ ಅಂತ ಸಾಬೀತುಪಡಿಸಿಕೊಂಡು ಬಿಟ್ಟಿರುತ್ತಾರೆ. ಜ್ವರ ಶುರುವಾಗಿ ಬಿಟ್ಟ ನಂತರ ಅದು ಹೇಗೆ ತಮ್ಮ ಮನೆಯ ಒಬ್ಬೊಬ್ಬರಿಗೇ ಅಮರಿಕೊಳ್ಳುತ್ತಾ ಸರಿ ಸುಮಾರು ಒಂದು ತಿಂಗಳುಗಳ ಕಾಲ ತಮ್ಮ ಮನೆಯಲ್ಲಿಯೇ ಝಂಡಾ ಊರಿ, ಅಟ್ಟಾಡಿಸಿ ಹೇಗೆ ಅದು ನಮ್ಮನ್ನೆಲ್ಲಾ ಸತಾಯಿಸಿಬಿಟ್ಟಿತು ಅನ್ನೋದನ್ನ ಕೇಳುವವರಿಗೆ ಜ್ವರ ಬರಿಸುವ ಹಾಗೆ ಹೇಳುತ್ತಿರುತ್ತಾರೆ. ಇದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಜ್ವರದ ತಾಪದಿಂದ ನರಳಿದ ವ್ಯಕ್ತಿ ಬಡ ಬಡಿಸುವ ಹಳಹಳಿಕೆಯ ಮಾತೆಂದು ಇದನ್ನು ತಳ್ಳಿ ಹಾಕುವಂತಿಲ್ಲ. ಜ್ವರದ ನರಳಿಕೆಯ ನರಕವನ್ನು ಅನುಭವಿಸಿ ಬಂದ ಪ್ರತಿಯೊಬ್ಬನೂ ತಾನು ಅನುಭವಿಸಿದಷ್ಟು ಯಾತನೆ ಮತ್ಯಾರೂ ಅನುಭವಿಸಿರಲಿಕ್ಕಿಲ್ಲ ಅಂತಾನೇ ಭಾವಿಸಿಕೊಂಡಿರುತ್ತಾರೆ. ಅವರವರ ಕಷ್ಟ ಅವರಿಗೇ ದೊಡ್ಡದು ಅನ್ನೋ ಹಾಗೆ. ಆದರೆ ಜ್ವರ ಬಂದು ಮಲಗಿದ ವ್ಯಕ್ತಿಗೆ ಉಪಚಾರ ಮಾಡಲು ಮನೆಯಲ್ಲಿ ಸಾಕಷ್ಟು ಮಂದಿ ಇದ್ದಾರೆ ಎಂದಾದರೆ ಅದು ಜ್ವರ ಪೀಡಿತ ವ್ಯಕ್ತಿಯ ಭಾಗ್ಯವೆಂದೇ ಪರಿಗಣಿಸಬೇಕು. ಆ ದಿಸೆಯಲ್ಲಿ ಸೋಮಾರಿತನ ಮತ್ತಷ್ಟು ಆವರಿಸಿಕೊಂಡು, ಮತ್ತೊಂದಷ್ಟು ದಿನ ನರಳಿಕೊಂಡು ವಿಶ್ರಾಂತಿಯ ಸುಖವನ್ನು ವಿಸ್ತರಿಸುವ ಪ್ರಯತ್ನವನ್ನು ಮಾಡುತ್ತಾ ಒಳಗೊಳಗೆ ಪರಮ ಸುಖವನ್ನು ಅನುಭವಿಸಿಬಿಡುತ್ತಾರೆ. ಆದರೆ ದುರ್ಭಾಗ್ಯದ ಸಂಗತಿಯೆಂದರೆ, ಮನೆಯಲ್ಲಿ ನೋಡಿಕೊಳ್ಳಲು ದುಡಿಯಲು ಇನ್ಯಾರು ಇಲ್ಲದ ಮನೆಯ ಆಸಾಮಿಗೆ ಜ್ವರ ಎಡತಾಕಿತು ಅಂದರೆ ಅವನ ಗ್ರಹಚಾರ ಕೆಟ್ಟು ಶನಿಕಾಟ ಶುರುವಾಯಿತು ಅಂತಾನೆ ಅರ್ಥ. ಅರೆ ಬರೆ ವಿಶ್ರಾಂತಿಯಲ್ಲಿ ಉಪಾಯವಿಲ್ಲದೆ ಮತ್ತೆ ಪುನಃ ಕೆಲಸ ಶುರುಮಾಡಿ ಆರೋಗ್ಯವನ್ನು ಮತ್ತಷ್ಟು ಹದಗೆಡಿಸಿಕೊಳ್ಳುತ್ತಾರೆ. ವೈದ್ಯರು ಮದ್ದಿನ ಚೀಟಿಯ ಜೊತೆಗೆ ವಿಶ್ರಾಂತಿಯನ್ನು ಕಡ್ಡಾಯ ತೆಗೆದುಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಹೇಳಿದ ಮಾತನ್ನು ಆಸ್ಪತ್ರೆಯಲ್ಲಿ ಮಾತ್ರ ಕಿವಿ ತುಂಬಿಸಿಕೊಂಡು ಮನೆ ಮೆಟ್ಟಿಲು ಹತ್ತೋಕೆ ಮುಂಚೆ ಕಿವಿಯಿಂದ ಹೊರತಳ್ಳಿ ಮರೆತೇ ಬಿಟ್ಟಿರುತ್ತಾರೆ. ಮರೆಯದೆ ವಿಧಿ ಇಲ್ಲ ಕೂಡ.

ಬಾಲ್ಯದಲ್ಲಿ ಅಂದರೆ ನಮ್ಮ ಪ್ರಾಥಮಿಕ ಶಾಲಾದಿನಗಳಲ್ಲಿ, ಶಾಲೆಗಳಿಗೆ ಮಳೆಗಾಲದ ಸಮಯದಲ್ಲಿ ಮಕ್ಕಳಿಗೆ ಲಸಿಕೆ ಹಾಕಲು ಬಿಳಿ ಸೀರೆ ಉಟ್ಟುಕೊಂಡ ನರ್ಸಮ್ಮಗಳು ಬರುತ್ತಿದ್ದರು. ಅದು 1, 3, 5, 7 ನೇ ತರಗತಿಯ ಮಕ್ಕಳಿಗೆ ಮಾತ್ರ ಈ ಲಸಿಕಾ ಕಾರ್ಯಕ್ರಮ. ಆಗೆಲ್ಲಾ ಈ ಲಸಿಕೆ ಕೊಡುವ ಉದ್ದೇಶವಾದರೂ ಏನು ಅಂತ ನಮಗ್ಯಾರಿಗೂ ಗೊತ್ತಿರಲಿಲ್ಲ. ಅದರ ಬಗ್ಗೆ ನಮಗ್ಯಾರು ಮಾಹಿತಿಯನ್ನು ಕೊಡುತ್ತಿರಲಿಲ್ಲ. ಗುರುಗಳೆಂದರೆ ಭಯಂಕರ ಭಯ ಹೊಂದಿದ್ದ ಆ ದಿನಗಳಲ್ಲಿ ಈ ವಿಷಯದ ಬಗ್ಗೆ ಕೇಳುವ ಧೈರ್ಯವನ್ನು ನಾವ್ಯಾರೂ ಮಾಡುತ್ತಿರಲಿಲ್ಲ. ಆದರೆ ಇವೆಲ್ಲವುಗಳಿಗಿಂತ ಹೆಚ್ಚಾಗಿ ನರ್ಸಮ್ಮಗಳ ಕೈಯಿಂದ ಸೂಜಿಯಿಂದ ಚುಚ್ಚಿಸಿಕೊಳ್ಳುವುದೇ ಹೆಚ್ಚಿನ ಭಯದ ಸಂಗತಿಯಾಗಿತ್ತು. ಈ ಭಾರಿ ಸೂಜಿ ನೋವಿನ ಪ್ರಸಂಗದಿಂದ ಪಾರಾಗುವ ಸಂದರ್ಭ ಬಂದದ್ದಕ್ಕಾಗಿ 2, 4, 6ನೇ ತರಗತಿಯ ಮಕ್ಕಳಿಗಂತೂ ಖುಷಿಯೋ ಖುಷಿ. ಹಾಗಾಗಿ ಅಚಾನಕ್ ಆಗಿ ಬಿಳಿ ಸೀರೆ ಉಟ್ಟ ನರ್ಸಮ್ಮಗಳನ್ನು ನಮ್ಮ ಶಾಲೆಯ ಆವರಣದಲ್ಲಿ ಕಂಡೇವು ಅಂದರೆ ಮುಗಿಯಿತು. ಆಗಲೇ ನಮ್ಮ ಕಣ್ಣಲ್ಲಿ ಹೇಳ ತೀರದ ದಿಗಿಲು. ಅವರು ಬರುವ ವಿಷಯ ಬಹುಶಃ ಟೀಚರ್‌ಗಳಿಗೆ ಮೊದಲೇ ಗೊತ್ತಿರುತ್ತಿತ್ತೋ ಏನೋ. ಅಧ್ಯಾಪಕರೇ ಈ ವಿಷಯವನ್ನು ಮಕ್ಕಳಿಂದ ಗೋಪ್ಯವಾಗಿಡುತ್ತಿದ್ದರು ಅನ್ನಿಸುತ್ತೆ. ನಾಳೆ ಶಾಲೆಯಲ್ಲಿ ಮಕ್ಕಳಿಗೆ ಇಂಜೆಕ್ಷನ್ ಕೊಡೋದಿದೆ, ನೀವೆಲ್ಲರೂ ತಪ್ಪದೇ ಬರಬೇಕು ಅಂತ ಮುನ್ನಾ ದಿನ ಅಸೆಂಬ್ಲಿ ಹಾಲ್‌ನಲ್ಲಿ ಮುಖ್ಯೋಪಾಧ್ಯಾಯರು ದೊಡ್ಡ ಸ್ವರದಲ್ಲಿ ಹೇಳಿ ಬಿಟ್ಟರೆ ಏನಾದೀತು? ಅಲ್ಲಿಗೆ ಕತೆ ಗೋವಿಂದ.